ನಿನ್ನಿಂದ ದೂರವಿರುವುದು, ಪ್ರಿಯ, ಅಸಹನೀಯ. ನನ್ನನ್ನೇಕೆ ತನ್ನ ಹತ್ತಿರ ಅವನು ಕರೆದು ಕೂರಿಸಿಕೊಳ್ಳುವುದಿಲ್ಲ?
ಅವನಿಲ್ಲದ ರಾತ್ರಿಗಳು ತುಂಬಾ ದೀರ್ಘ – ನನ್ನ ಪ್ರಿಯನ ನೀಳ ಕೇಶದಂತೆ;
ಅವನೊಡನಿರುವ ದಿನಗಳೋ ತುಂಬಾ ಅಲ್ಪ – ಬದುಕಿನಂತೆಯೇ.
ಗೆಳೆಯ, ನನ್ನ ಪ್ರಿಯಕರನನ್ನು ನೋಡದೆ, ರಾತ್ರಿಗಳ ಕತ್ತಲೆಯನ್ನು ಹೇಗೆ ದೂರಮಾಡಲಿ?
ಹಠಾತ್ತನೆ, ನನ್ನ ಶಾಂತಿಯನ್ನು ಕಸಿಯುತ್ತವೆ ಮೋಹಕ ಕಣ್ಣುಗಳು, ಹಾಗೂ ನೂರಾರು ಮಾಂತ್ರಿಕ ಕುಡಿನೋಟಗಳು.
ನಾನು ನಿನಗೆ ಹೇಳುವುದನ್ನೆಲ್ಲಾ ಯಾರು ನನ್ನ ಸುಂದರ ಪ್ರಿಯಕರನಿಗೆ ತಿಳಿಸುವ ಕಷ್ಟ ತೆಗೆದುಕೊಳ್ಳುತ್ತಾರೆ?
ಆ ಚಂದ್ರನಿಗಾಗಿ ನಾನು ಕೊನೆಯಿಲ್ಲದಂತೆ ಅಳುತ್ತಾ,
ಉರಿಯುತ್ತಿದ್ದೇನೆ ಮೊಂಬತ್ತಿಯಂತೆ, ಚೆಲ್ಲಿಹೋಗಿದ್ದೇನೆ ಹಿಟ್ಟಾದ ಕಾಳುಗಳಂತೆ.
ನನ್ನ ಕಣ್ಣುಗಳಲ್ಲಿ ನಿದ್ದೆಯಿಲ್ಲ, ನನ್ನ ದೇಹಕ್ಕೆ ವಿಶ್ರಾಂತಿಯಿಲ್ಲ.
ಅವನು ಬರುವುದೂ ಇಲ್ಲ, ಇತರರೊಡನೆ ಕಳಿಸುವುದೂ ಇಲ್ಲ ಸಂದೇಶವನ್ನು.
ನನ್ನ ಪ್ರಿಯನ ಸಂಗಮಕ್ಕಾಗಿ ಈ ಕಾಣಿಕೆ, ಖುಸ್ರೋನನ್ನು ಬಹುಕಾಲ ಆಕರ್ಷಿಸಿದವನ ಸ್ತುತಿಗಾಗಿ.
ನನ್ನ ಹೃದಯದ ಬಡಿತವನ್ನು ಕೇಳಿಸದಂತೆ ತಡೆಯುತ್ತೇನೆ, ನನ್ನ ಪ್ರಿಯನ ಬಳಿ ಹೋಗುವ ತನಕ.

## ಯಾರೆ, ಯಾರೆ ಆ ಹುಡುಗ?

ಅವ ಬರುತ್ತಾನೆ ನನ್ನೂರಿಗೆ, ವರ್ಷಕ್ಕೊಮ್ಮೆ;
ಸುರಿಯುತ್ತಾನೆ ನನ್ನ ಬಾಯ್ತುಂಬ ಮುತ್ತುಗಳನ್ನು ಹಾಗೂ ಮಧುವನ್ನು;
ನನ್ನ ತಾಯಿಯ ಹಣವನ್ನೆಲ್ಲಾ ಖರ್ಚು ಮಾಡುತ್ತೇನೆ ಅವನಿಗಾಗಿ.
ಯಾರೆ, ಯಾರೆ ಆ ಹುಡುಗ?
ಹುಡುಗನಲ್ಲ, ಮಾವಿನ ಹಣ್ಣು.

## ಅವನೊಬ್ಬನೇ ಇರುತ್ತಾನೆ ರಾತ್ರಿಯೆಲ್ಲಾ – ನನ್ನೊಡನೆ

ಅವನೊಬ್ಬನೇ ಇರುತ್ತಾನೆ ರಾತ್ರಿಯೆಲ್ಲಾ – ನನ್ನೊಡನೆ,
ಬೆಳಕು ಹರಿಯುತ್ತಲೇ ಹೊರ ಹೋಗುತ್ತಾನೆ.
ಅವನು ನನ್ನನ್ನು ಬಿಟ್ಟು ಹೋದಾಗ ಒಡೆದು ಹೋಗುತ್ತದೆ –ನನ್ನ ಹೃದಯ,

ಯಾರೆ, ಯಾರೆ ಆ ಹುಡುಗ?
ಹುಡುಗನಲ್ಲ, ಎಣ್ಣೆಯ ದೀಪ.



## ಅವನು ದಾಳಿ ಮಾಡುತ್ತಾನೆ – ನಡುರಾತ್ರಿಯಲ್ಲಿ

ಅವನು ದಾಳಿ ಮಾಡುತ್ತಾನೆ, ನಡುರಾತ್ರಿಯಲ್ಲಿ;
ಕಸಿಯುತ್ತಾನೆ, ನಾ ಧರಿಸಿದ ಒಡವೆಗಳನ್ನೆಲ್ಲಾ,